# All India Radio: Bangalore
# National Bulletin In Kannada
## ಆಕಾಶವಾಣಿ, ಬೆಂಗಳೂರು
## ರಾಷ್ಟ್ರೀಯ ವಾರ್ತೆಗಳು

30.01.2026 7.35 pm

<>><><*><><<>

ಮುಖ್ಯಾಂಶಗಳು

- ಇಂದು ಮಹಾತ್ಮಗಾಂಧಿಯವರ ೭೮ನೇ ಪುಣ್ಯತಿಥಿ; ಗಾಂಧಿ ಸ್ಮೃತಿಯಲ್ಲಿ ಉಪರಾಷ್ಟ್ರಪತಿ, ಪ್ರಧಾನಿ ಸೇರಿದಂತೆ ಗಣ್ಯರಿಂದ ಗೌರವ ನಮನ
- ಗಣರಾಜ್ಯೋತ್ಸವ ಪರೇಡ್‌ನಲ್ಲಿ ಭಾಗವಹಿಸಿದ್ದ ಅತ್ಯುತ್ತಮ ಮೆರವಣಿಗೆ ತಂಡಗಳು ಹಾಗೂ ಸ್ತಬ್ಧಚಿತ್ರಗಳಿಗೆ ಪ್ರಶಸ್ತಿ ಪ್ರದಾನ
- ಭಾರತ ಕೃತಕಬುದ್ಧಿಮತ್ತೆ ಇಂಪ್ಯಾಕ್ಟ್ ಶೃಂಗಸಭೆ-೨೦೨೬ ರಲ್ಲಿ ಭಾಗವಹಿಸಲು, ನವೋದ್ಯಮಗಳಿಂದ ಅರ್ಜಿ ಆಹ್ವಾನ
- ಭಾರತ ಇಂಧನ ಸಪ್ತಾಹ ೨೦೨೬ ರ ನಾಲ್ಕನೇ ಆವೃತ್ತಿ ಇಂದು ಸಂಪನ್ನ
- ಡಬ್ಲ್ಯೂಪಿಎಲ್ ಟಿ-೨೦ ಕ್ರಿಕೆಟ್; ಮುಂಬೈ ವಿರುದ್ಧ ಟಾಸ್ ಗೆದ್ದ ಗುಜರಾತ್ ಜೈಂಟ್ಸ್, ಬ್ಯಾಟಿಂಗ್ ಆಯ್ಕೆ

<>><><*><><<>

ಮಹಾತ್ಮಾ ಗಾಂಧಿಯವರ ೭೮ ನೇ ಪುಣ್ಯತಿಥಿಯ ಅಂಗವಾಗಿ ನವದೆಹಲಿಯ ಗಾಂಧಿ ಸ್ಮೃತಿಯಲ್ಲಿಂದು ಸಂಜೆ ನಡೆದ ಸರ್ವಧರ್ಮ ಪ್ರಾರ್ಥನಾ ಸಭೆಯಲ್ಲಿ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಮತ್ತು ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಿದ್ದರು. ರಾಷ್ಟ್ರಪಿತ ಮಹಾತ್ಮ ಗಾಂಧಿಯವರು ೧೯೪೮ ರಲ್ಲಿ ಈ ದಿನದಂದು ಇಂದಿನ ಗಾಂಧಿಸ್ಮೃತಿಯಾಗಿರುವ ನವದೆಹಲಿಯ ಬಿರ್ಲಾ ಹೌಸ್ ನಲ್ಲಿ ಹತ್ಯೆಗೀಡಾಗಿದ್ದರು. ಪುಣ್ಯತಿಥಿಯ ಸಂದರ್ಭದಲ್ಲಿ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್, ಗಾಂಧೀಜಿಯವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದ್ದಾರೆ. ಮಹಾತ್ಮ ಗಾಂಧಿಯವರ ಕಾಲಾತೀತ ಮಾಂತ್ರಿಕತೆ, ಬಡ ಮತ್ತು ದುರ್ಬಲ ವ್ಯಕ್ತಿಯನ್ನು ನೆನಪಿಸುವಂತೆ ಮಾಡಿ, ಭಾರತದ ಕಾರ್ಯಗಳು ಹಾಗೂ ನೀತಿಗಳಿಗೆ ನೈತಿಕ ದಿಕ್ಸೂಚಿಯಾಗಿದೆ ಎಂದು ಉಪರಾಷ್ಟ್ರಪತಿ ಸಾಮಾಜಿಕ ಮಾಧ್ಯದಲ್ಲಿ ಹೇಳಿದ್ದಾರೆ. ನ್ಯಾಯ, ಸಾಮರಸ್ಯ ಮತ್ತು ಎಲ್ಲರನ್ನೂ ಒಳಗೊಂಡ ಸಮಾಜದ ಅನ್ವೇಷಣೆಯಲ್ಲಿ ಗಾಂಧಿಯವರ ಶಾಶ್ವತ ಮೌಲ್ಯಗಳನ್ನು ಎತ್ತಿಹಿಡಿಯುವ ಸರ್ಕಾರದ ಬದ್ಧತೆಯನ್ನು ಉಪರಾಷ್ಟ್ರಪತಿಗಳು ಪುನರುಚ್ಚರಿಸಿದ್ದಾರೆ. ಬಾಪು ಅವರು ಸಾಕಾರಗೊಳಿಸಿದ ಸತ್ಯ, ಅಹಿಂಸೆ ಮತ್ತು ನಿಸ್ವಾರ್ಥ ಸೇವೆಯ ಜೀವನ ಮತ್ತು ಆದರ್ಶಗಳು ಮಾನವೀಯತೆಗೆ ಸ್ಫೂರ್ತಿ ನೀಡುತ್ತಲೇ ಇರುತ್ತವೆ ಎಂಬ ಆಶಯವನ್ನು ಅವರು ವ್ಯಕ್ತಪಡಿಸಿದ್ದಾರೆ.

<>><><*><><<>

೨೦೨೬ ರ ಗಣರಾಜ್ಯೋತ್ಸವದ ಪರೇಡ್‌ನಲ್ಲಿ ಭಾಗವಹಿಸಿದ್ದ ಅತ್ಯುತ್ತಮ ಮೆರವಣಿಗೆ ತಂಡಗಳು ಮತ್ತು ಅತ್ಯುತ್ತಮ ಸ್ತಬ್ಧಚಿತ್ರಗಳಿಗೆ ಪ್ರಶಸ್ತಿಗಳನ್ನು ರಕ್ಷಣಾ ಖಾತೆ ರಾಜ್ಯ ಸಚಿವ ಸಂಜಯ್ ಸೇಠ್ ಪ್ರದಾನ ಮಾಡಿದರು. ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಸ್ತಬ್ಧಚಿತ್ರ ವಿಭಾಗದಲ್ಲಿ, ಮಹಾರಾಷ್ಟ್ರದ ಗಣೇಶೋತ್ಸವ: ಆತ್ಮನಿರ್ಭರತೆಯ ಸಂಕೇತಕ್ಕಾಗಿ ಅತ್ಯುತ್ತಮ ಸ್ತಬ್ಧಚಿತ್ರ ಪ್ರಶಸ್ತಿ

ಗೆದ್ದುಕೊಂಡಿತು. ನಂತರದ ಸ್ಥಾನ ಕ್ರಮವಾಗಿ ಜಮ್ಮು ಮತ್ತು ಕಾಶ್ಮೀರ ಹಾಗೂ ಕೇರಳದ ಪಾಲಾಯಿತು. ಮೂರು ಸೇನೆಗಳಲ್ಲಿ, ಭಾರತೀಯ ನೌಕಾಪಡೆಯು, ಅತ್ಯುತ್ತಮ ಪಥಸಂಚಲನಪಡೆ ಪ್ರಶಸ್ತಿ ಗೆದ್ದುಕೊಂಡಿತು. ದೆಹಲಿ ಪೊಲೀಸರು, ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳು ಮತ್ತು ಇತರ ಸಹಾಯಕ ಪಡೆಗಳ ವಿಭಾಗದಲ್ಲಿ ಪ್ರಶಸ್ತಿಯನ್ನು ಗೆದ್ದರು. ಕೇಂದ್ರ ಸಚಿವಾಲಯಗಳು ಮತ್ತು ಇಲಾಖೆಗಳಲ್ಲಿ, ಸಂಸ್ಕೃತಿ ಸಚಿವಾಲಯಕ್ಕೆ, ’ವಂದೇ ಮಾತರಂ - ದಿ ಸೋಲ್ ಕ್ರೈ ಆಫ್ ಎ ನೇಷನ್‌ಗಾಗಿ’ ಅತ್ಯುತ್ತಮ ಸ್ತಬ್ಧಚಿತ್ರ ಪ್ರಶಸ್ತಿ ಲಭಿಸಿದೆ.

ಕೇಂದ್ರ ಲೋಕೋಪಯೋಗಿ ಇಲಾಖೆಗೆ ವಂದೇ ಮಾತರಂ - ೧೫೦ ವರ್ಷಗಳ ಸ್ಮರಣೆ ಮತ್ತು ವಂದೇ ಮಾತರಂ: ದಿ ಎಟರ್ನಲ್ ರೆಸೋನೆನ್ಸ್ ಆಫ್ ಇಂಡಿಯಾ ನೃತ್ಯಕ್ಕೆ ವಿಶೇಷ ಬಹುಮಾನಗಳನ್ನು ನೀಡಲಾಯಿತು. MyGov ಸಮೀಕ್ಷೆಯ ಆಧಾರದ ಮೇಲೆ ಪಾಪ್ಯುಲರ್ ಚಾಯ್ಸ್ ಪ್ರಶಸ್ತಿಗಳಲ್ಲಿ, ಅಸ್ಸಾಂ ರೆಜಿಮೆಂಟ್ ಮತ್ತು ಸಿಆರ್‌ಪಿಎಫ್ ಅತ್ಯುತ್ತಮ ಪಥಸಂಚಲನ ಪಡೆ ಪ್ರಶಸ್ತಿಗಳನ್ನು ಗೆದ್ದವು. ಗುಜರಾತ್ ಅತ್ಯುತ್ತಮ ಸ್ತಬ್ಧಚಿತ್ರ ಪ್ರಶಸ್ತಿಯನ್ನು ಜಯಸಿದರೆ, ಉತ್ತರ ಪ್ರದೇಶ ಮತ್ತು ರಾಜಸ್ಥಾನ ನಂತರ ಸ್ಥಾನಪಡೆದಿವೆ. ಕೇಂದ್ರ ಸಚಿವಾಲಯಗಳ ವಿಭಾಗದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಅಗ್ರಸ್ಥಾನದಲ್ಲಿವೆ.

<>><><*><><<>

ಮುಂದಿನ ತಿಂಗಳು ನವದೆಹಲಿಯಲ್ಲಿ ನಡೆಯಲಿರುವ ಭಾರತ ಕೃತಕಬುದ್ಧಿಮತ್ತೆ ಇಂಪ್ಯಾಕ್ಟ್ ಶೃಂಗಸಭೆ-೨೦೨೬ ರಲ್ಲಿ ಭಾಗವಹಿಸಲು ನವೋದ್ಯಮಗಳಿಂದ, ಸರ್ಕಾರದ ಸ್ಟಾರ್ಟ್‌ಅಪ್ ಆಕ್ಸಿಲರೇಟರ್ ಪ್ಲಾಟ್‌ಫಾರ್ಮ್ ಆದ ವೇವ್‌ಎಕ್ಸ್ ಅರ್ಜಿಗಳನ್ನು ಆಹ್ವಾನಿಸಿದೆ. ಇಂಡಿಯಾ ಎಐ ಇಂಪ್ಯಾಕ್ಟ್ ಶೃಂಗಸಭೆ, ಮುಂದಿನ ತಿಂಗಳು ೧೬ ರಿಂದ ೨೦ ರವರೆಗೆ ನಡೆಯಲಿದೆ. ಭಾರತದ ವೇಗವಾಗಿ ಬೆಳೆಯುತ್ತಿರುವ ಎಐ ಪರಿಸರ ವ್ಯವಸ್ಥೆಯಾದ್ಯಂತ ನವೀನ ಕೃತಕ ಬುದ್ಧಿಮತ್ತೆ ಪರಿಹಾರಗಳನ್ನು ಪ್ರದರ್ಶಿಸಲು ಮತ್ತು ಸಹಯೋಗವನ್ನು ಬೆಳೆಸಲು ಶೃಂಗಸಭೆಯು ಪ್ರಮುಖ ರಾಷ್ಟ್ರೀಯ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ ಎಂದು ವಾರ್ತಾ ಮತ್ತು ಪ್ರಸಾರ ಸಚಿವಾಲಯ ತಿಳಿಸಿದೆ. ಶೃಂಗಸಭೆಯ ಭಾಗವಾಗಿ, ವೇವ್‌ಎಕ್ಸ್ ಮೀಸಲಾದ ನವೋದ್ಯಮ ಪ್ರದರ್ಶನ ಕಾರ್ಯಕ್ರಮವನ್ನು ಆಯೋಜಿಸುತ್ತಿದೆ. ಇದು ಆಯ್ದ ನವೋದ್ಯಮಗಳು, ತಮ್ಮ ಎಐ-ಚಾಲಿತ ಉತ್ಪನ್ನಗಳು ಮತ್ತು ಪರಿಹಾರಗಳನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪ್ರೇಕ್ಷಕರಿಗೆ ಪ್ರದರ್ಶಿಸಲು ಅನುವು ಮಾಡಿಕೊಡುತ್ತದೆ.

<>><><*><><<>

ನವದೆಹಲಿಯಲ್ಲಿ ನಡೆಯಲಿರುವ ಭಾರತ- ಕೃತಕ ಬುದ್ಧಿಮತ್ತೆ ಇಂಪ್ಯಾಕ್ಟ್ ಶೃಂಗಸಭೆ-೨೦೨೬ ಇದುವರೆಗೆ ನಡೆದ ಇಡೀ ವಿಶ್ವದಲ್ಲಿಯೇ ಅತಿದೊಡ್ಡ ಎಐ ಶೃಂಗಸಭೆಯಾಗಲಿದೆ ಎಂದು ಕೇಂದ್ರ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ನವದೆಹಲಿಯಲ್ಲಿಂದು ಮಾಧ್ಯಮಗಳನ್ನುದ್ದೇಶಿಸಿ ಮಾತನಾಡಿದ ಸಚಿವರು, ೧೦೦ ಕ್ಕೂ ಹೆಚ್ಚು ಸಿಇಒಗಳು ಇಐ ಇಂಪ್ಯಾಕ್ಟ್ ಶೃಂಗಸಭೆಯಲ್ಲಿ ಸೇರುತ್ತಿದ್ದಾರೆ. ಭಾರತವು ತನ್ನ ಕೃತಕಬುದ್ಧಿಮತ್ತೆ ಪರಿಸರ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿದ ವಿಧಾನವನ್ನು ಶ್ಲಾಘಿಸಿ, ಪ್ರೋತ್ಸಾಹಿಸುವುದಾಗಿ ತಿಳಿಸಿದರು.

<>><><*><><<>

ಅಸ್ಸಾಂನ ದಿಬ್ರುಗಢದಲ್ಲಿಂದು ಎರಡನೇ ಶಾಸಕಾಂಗ ಸಂಕೀರ್ಣ ಸ್ಥಾಪನೆ ಸೇರಿದಂತೆ ಒಂದು ಸಾವಿರದ ೭೧೫ ಕೋಟಿ ರೂಪಾಯಿ ಮೊತ್ತದ ವಿವಿಧ ಯೋಜನೆಗಳನ್ನು ಗೃಹ ಸಚಿವ ಅಮಿತ್ ಶಾ ಲೋಕಾರ್ಪಣೆ ಮಾಡಿದರು. ಈ ಸಂದರ್ಭದಲ್ಲಿ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ, ಕೇಂದ್ರ ಸಚಿವ

ಸರ್ಬಾನಂದ ಸೋನೋವಾಲ್ ಮತ್ತು ಇತರ ಗಣ್ಯರು ಉಪಸ್ಥಿತರಿದ್ದರು..  ಸಚಿವ ಅಮಿತ್ ಶಾ, ದಿಬ್ರುಗಢವನ್ನು ಎರಡನೇ ಆಡಳಿತ ಕೇಂದ್ರವಾಗಿ ಸ್ಥಾಪಿಸುವ ಸರ್ಕಾರದ ಪ್ರಯತ್ನಗಳ ಭಾಗವಾಗಿ ೨೮೪ ಕೋಟಿ ರೂಪಾಯಿಗಳ ಎರಡನೇ ಶಾಸಕಾಂಗ ಸಂಕೀರ್ಣ ಮತ್ತು ಶಾಸಕರ ಹಾಸ್ಟೆಲ್ ಸೇರಿದಂತೆ ಹಲವು ಯೋಜನೆಗಳಿಗೆ ಶಂಕುಸ್ಥಾಪನೆ ಹಾಗೂ ಲೋಕಾರ್ಪಣೆ ಮಾಡಿದರು.

<>><><*><><<>

ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಅವರು ನವದೆಹಲಿಯಲ್ಲಿಂದು ಅರಬ್ ರಾಷ್ಟ್ರಗಳ ಲೀಗ್‌ನ ಪ್ರಧಾನ ಕಾರ್ಯದರ್ಶಿ ಅಹ್ಮದ್ ಅಬೌಲ್ ಘೀತ್ ಅವರೊಂದಿಗೆ ಸಭೆ ನಡೆಸಿದರು. ಈ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿ, ವಿವಿಧ ಕ್ಷೇತ್ರಗಳಲ್ಲಿ ಸಹಕಾರ ಮತ್ತು ಬಲಪಡಿಸುವ ಕುರಿತು ಚರ್ಚೆ ನಡೆಸಲಾಯಿತು ಎಂದು ಹೇಳಿದ್ದಾರೆ.

<>><><*><><<>

ಭಾರತ ಇಂಧನ ಸಪ್ತಾಹ ೨೦೨೬ ರ ನಾಲ್ಕನೇ ಆವೃತ್ತಿ ಇಂದು ಮುಕ್ತಾಯಗೊಂಡಿತು.  ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವ ಹರ್ದೀಪ್ ಸಿಂಗ್ ಪುರಿ, ಭಾರತ ಇಂಧನ ಸಪ್ತಾಹದ ಈ ಕಾರ್ಯಕ್ರಮದಲ್ಲಿ ಜಾಗತಿಕ ಸಿಇಒಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದಾರೆ ಮತ್ತು ಅಂತಾರಾಷ್ಟ್ರೀಯ ಕಂಪನಿಗಳಿಂದ ಹೆಚ್ಚಿನ ಆಸಕ್ತಿ ಕಂಡುಬಂದಿದ್ದು, ಇಂಧನ, ಅನಿಲ ಮತ್ತು ಹಡಗು ವಲಯಗಳಲ್ಲಿ ಹಲವಾರು ಒಪ್ಪಂದಗಳಿಗೆ ಸಹಿ ಹಾಕಲಾಗಿದೆ ಎಂದು ಹೇಳಿದರು.  ಹೊಸ ಜಾಗತಿಕ ಉದ್ಯಮಿಗಳು, ಭಾರತೀಯ ಸಂಸ್ಥೆಗಳೊಂದಿಗೆ ಸಹಕರಿಸಲು ಉತ್ಸುಕರಾಗಿದ್ದಾರೆ. ಭಾರತ ಇಂಧನ ಸಪ್ತಾಹವು ಈಗಾಗಲೇ ವಿಶ್ವದ ಎರಡನೇ ಅತಿದೊಡ್ಡ ಇಂಧನ ವೇದಿಕೆಯಾಗಿದೆ ಮತ್ತು ಹಸಿರು ಹೈಡ್ರೋಜನ್, ಸಂಕುಚಿತ ಜೈವಿಕ ಅನಿಲ, ಸಣ್ಣ ಮಾಡ್ಯುಲರ್ ರಿಯಾಕ್ಟರ್‌ಗಳು ಮತ್ತು ಉದಯೋನ್ಮುಖ ತಂತ್ರಜ್ಞಾನಗಳಂತಹ ಬಹು ವಲಯಗಳನ್ನು ಒಳಗೊಂಡಿದೆ ಎಂದು ಸಚಿವರು ತಿಳಿಸಿದರು.

<>><><*><><<>

ಪಶ್ಚಿಮ ಬಂಗಾಳದಲ್ಲಿ ಮತದಾರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣಾ ವಿಚಾರಣೆಯ ಸಮಯದಲ್ಲಿ ಚುನಾವಣಾ ಆಯೋಗವು ನಿರ್ದಿಷ್ಟಪಡಿಸಿದ ದಾಖಲೆಗಳನ್ನು ಹೊರತುಪಡಿಸಿ, ಇತರ ದಾಖಲೆಗಳನ್ನು ಸಲ್ಲಿಸಿದ ಮತದಾರರ ಹೆಸರುಗಳನ್ನು ಅಂತಿಮ ಪಟ್ಟಿಯಿಂದ ಹೊರಗಿಡಲಾಗುತ್ತದೆ ಎಂದು ಚುನಾವಣಾ ಆಯೋಗ ತಿಳಿಸಿದೆ. ಆಯೋಗವು ಅಂತಹ ದಾಖಲೆಗಳನ್ನು ಸ್ವೀಕರಿಸಿದ ಸಂಬಂಧಿತ ಚುನಾವಣಾ ಅಧಿಕಾರಿಗಳ ಪ್ರತ್ಯೇಕ ಪಟ್ಟಿಯನ್ನು ಸಹ ಸಿದ್ಧಪಡಿಸಿದೆ ಮತ್ತು ಅವುಗಳನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಿದೆ.  ಆಯೋಗದ ಮೂಲಗಳ ಪ್ರಕಾರ, ಕರ್ತವ್ಯದಲ್ಲಿ ನಿರ್ಲಕ್ಷ್ಯ ಅಥವಾ ನಿಯಮಗಳ ಉಲ್ಲಂಘನೆಯ ಪುರಾವೆಗಳು ಕಂಡುಬಂದರೆ, ಆ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು.

<>><><*><><<>

ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ಅವರು ಇಂದು ಮಧ್ಯಾಹ್ನ ದೆಹಲಿಯಲ್ಲಿ ಲಿಬಿಯಾದ ವಿದೇಶಾಂಗ ಸಚಿವ ಎಲ್ತಾಹೆರ್ ಎಲ್ಬೌರ್ ಅವರನ್ನು ಭೇಟಿಯಾದರು. ವ್ಯಾಪಾರ, ವ್ಯವಹಾರ, ಮೂಲಸೌಕರ್ಯ ಮತ್ತು ಇಂಧನ ಕ್ಷೇತ್ರಗಳಲ್ಲಿ ಸಹಕಾರವನ್ನು ಹೆಚ್ಚಿಸುವ ಕುರಿತು ಅವರು ಮಹತ್ವದ ಚರ್ಚೆಗಳನ್ನು ನಡೆಸಿದರು.

<>><><*><><<>

ವಿದೇಶಾಂಗ ಸಚಿವ ಡಾ.ಎಸ್.ಜೈಶಂಕರ್ ನವದೆಹಲಿಯಲ್ಲಿಂದು ಕೊಮೊರೊಸ್ ವಿದೇಶಾಂಗ ಸಚಿವ ಎಂಬೆ ಮೊಹಮ್ಮದ್ ಅವರೊಂದಿಗೆ ಸಭೆ ನಡೆಸಿದರು.  ಸಭೆಯಲ್ಲಿ, ಭಾರತ ಮತ್ತು ಕೊಮೊರೊಸ್

ಆರೋಗ್ಯ, ಕ್ರೀಡೆ, ಮೂಲಸೌಕರ್ಯ ಮತ್ತು ಸಾಮರ್ಥ್ಯ ವೃದ್ಧಿಯಲ್ಲಿ ಸಹಕಾರದ ಕುರಿತು ಮಾತುಕತೆ ನಡೆಸಲಾಯಿತು.

<>><><*><><<>

ಕೋಟಂಬಿಯಾದ ವಡೋದರಾ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿಂದು ನಡೆಯುತ್ತಿರುವ ಮಹಿಳಾ ಪ್ರೀಮಿಯರ್ ಲೀಗ್-ಡಬ್ಲ್ಯೂಪಿಎಲ್ ಟಿ-೨೦ ಕ್ರಿಕೆಟ್‌ನ ೧೯ನೇ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ಹಾಗೂ ಮುಂಬೈ ಇಂಡಿಯನ್ಸ್ ತಂಡಗಳು ಸೆಣಸುತ್ತಿವೆ. ಟಾಸ್ ಗೆದ್ದ ಗುಜರಾತ್ ಜೈಂಟ್ಸ್ ತಂಡ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿದೆ.

<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>

<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ><><<>